# ವೀಕ್ಷಣಾಲಯಕ್ಕೆ ಚಾಲನೆ ಇಂದು

Vijaya Vani 27/2/13

**ಶಿವಮೊಗ್ಗ:** ನಗರಕ್ಕೆ ಸಮೀಪದ ಜಾವಳ್ಳಿಯ ಜ್ಞಾನದೀಪ ಶಾಲೆಯಲ್ಲಿ ಆಕಾಶ ವೀಕ್ಷಣಾಲಯ ಸ್ಥಾಪಿಸಿದ್ದು, ಫೆ. 28 ರಾಷ್ಟ್ರೀಯ ವಿಜ್ಞಾನ ದಿನದಂದು ಉದ್ಘಾಟನೆ ನೆರವೇರಲಿದೆ ಎಂದು ವಿದ್ಯಾಸಂಸ್ಥೆ ಕಾರ್ಯದರ್ಶಿ ವಿ.ದೇವೇಂದ್ರ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಖ್ಯಾತ ವಿಜ್ಞಾನಿ ಡಾ. ಸಿ.ವಿ.ರಾಮನ್ ಬಳಸುತ್ತಿದ್ದ ಹಳೆಯ ವೀಕ್ಷಣಾಲಯವನ್ನು ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯಿಂದ ಪಡೆದು ಅದನ್ನು ಆಧುನೀಕರಿಸಿ, ಅತ್ಯಾಧುನಿಕ ಟೆಲಿಸ್ಕೋಪ್ ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ವೀಕ್ಷಣಾಲಯದಲ್ಲಿರುವ ಎಲ್ಲಾ ಉಪಕರಣಗಳ ಒಟ್ಟು ತೂಕ 5 ಟನ್, ವೀಕ್ಷಣಾಲಯ 15 ಅಡಿ ಎತ್ತರ ಮತ್ತು 15 ಅಡಿ ವ್ಯಾಸವಿದೆ. ವಿದ್ಯಾಲಯದ ಕಟ್ಟಡದ ಮೇಲ್ಭಾಗದಲ್ಲಿ ಇದನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಆಕಾಶಕಾಯಗಳ ಪರಿವೀಕ್ಷಣೆ ಮತ್ತು ಅಧ್ಯಯನಕ್ಕೆ ಆಕಾಶ ವೀಕ್ಷಣಾಲಯ ಅವಶ್ಯ. ರಾಜ್ಯದಲ್ಲಿ ಬೆಂಗಳೂರಿನ ನೆಹರೂ ತಾರಾಲಯ, ರಾಮನ್ ಇನ್‌ಸ್ಟಿಟ್ಯೂಟ್ ಬಿಟ್ಟರೆ ಬೇರೆಡೆ ಆಕಾಶ ವೀಕ್ಷಣಾಲಯ ಇರಲಿಲ್ಲ. ಈ ಕೊರತೆ ನೀಗಿಸುವ ನಿಟ್ಟಿನಲ್ಲಿ ಜ್ಞಾನದೀಪ ಶಾಲೆಯಲ್ಲಿ ಸುಸಜ್ಜಿತ ಆಕಾಶ ವೀಕ್ಷಣಾಲಯ ಸ್ಥಾಪನೆ ಮಾಡಲಾಗಿದೆ ಎಂದು ವಿವರಿಸಿದರು.

ಫೆ. 28 ರಂದು ಮಧ್ಯಾಹ್ನ 3ಕ್ಕೆ ರಾಮನ್ ಸಂಶೋಧನಾ ಸಂಸ್ಥೆಯ ಹಿರಿಯ ಪ್ರೊ. ಉದಯಶಂಕರ್ ಇದನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ನಂತರ 'ಸ್ಟೋರಿ ಆಫ್ ದಿ ಇನ್‌ವಿಸಿಬಲ್ ಯುನಿವರ್ಸ್' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರತಿ ದಿನ ಸಂಜೆ 5ರಿಂದ ರಾತ್ರಿ 8 ಗಂಟೆವರೆಗೆ ಆಕಾಶ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಕೇವಲ ಜ್ಞಾನದೀಪ ಶಾಲೆ ವಿದ್ಯಾರ್ಥಿಗಳು ಮಾತ್ರವಲ್ಲದೆ ಇತರೆ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ವೀಕ್ಷಣಾಲಯದ ಸದುಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ರಾಮ್ ಕುಮಾರ್ ಹಾಗೂ ಪ್ರಾಚಾರ್ಯ ಶ್ರೀಕಾಂತ ಹೆಗಡೆ ಮತ್ತಿತರರು ಉಪಸ್ಥಿತರಿದ್ದರು.